# ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with `A' Grade)

ಸಂಖ್ಯೆ: ಮಂ.ವಿ./ಪ.ವಿ./ಸಿಆರ್.14/2020-2021/ಇ.5

ಕುಲಸಚಿವರ (ಪರೀಕ್ಷಾಂಗ) ಕಛೇರಿ,
ಮಂಗಳಗಂಗೋತ್ರಿ - 574 199.
ದಿನಾಂಕ: 11.02.2021

**ಪರಿಷ್ಕೃತ ಪ್ರಕಟಣೆ**

ಉಲ್ಲೇಖ:1)ಈ ಕಛೇರಿ ಪ್ರಕಟಣೆ ದಿನಾಂಕ: 22.01.2021.

2)ಕುಲಸಚಿವರ ಪತ್ರ ಸಂಖ್ಯೆ ಮವಿ/ಎಸಿಸಿ/ಯುಜಿ-Cal/ಸಿ.ಆರ್.-1/2020-21/ಎ6 ದಿನಾಂಕ: 11.02.2021.

********

2021ರ ಏಪ್ರಿಲ್ ತಿಂಗಳಲ್ಲಿ ನಡೆಯಲಿರುವ ಆಯ್ಕೆ ಆಧಾರಿತ ಪ್ರಥಮ ಸೆಮಿಸ್ಟರ್ ಆವರ್ತಿತ ಮತ್ತು ಪುನರಾವರ್ತಿತ, ಆಯ್ಕೆ ಆಧಾರಿತ ತೃತೀಯ ಸೆಮಿಸ್ಟರ್ ಆವರ್ತಿತ, ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ & ತೃತೀಯ ಸೆಮಿಸ್ಟರ್ ಪುನರಾವರ್ತಿತ, ಪಂಚಮ ಸೆಮಿಸ್ಟರ್ ಆವರ್ತಿತ ಮತ್ತು ಮುನರಾವರ್ತಿತ ಹಾಗೂ ವಾರ್ಷಿಕ ಪದ್ಧತಿಯ ಮುನರಾವರ್ತಿತ ಬಿ.ಎ./ಬಿ.ಎಸ್ಸಿ./ ಬಿ.ಕಾಂ./ ಬಿ.ಎಸ್.ಡಬ್ಲ್ಯು../ ಬಿ.ಎಸ್ಸಿ.(ಎಫ್.ಎನ್.ಡಿ.)/ಬಿ.ಎಸ್ಸಿ. ಆ್ಯನಿಮೇಶನ್ ಮತ್ತು ವಿಜ್ಯುವಲ್ ಇಫೆಕ್ಟ್ಸ್ / ಬಿ.ಎಸಿ.(ಮಡ್ ಟೆಕ್ನಾಲಜಿ) ಪದವಿಯ ಲಿಖಿತ ಪರೀಕ್ಷೆಗಳು ದಿನಾಂಕ 01.04.2021ರಿಂದ ಪ್ರಾರಂಭವಾಗಲಿರುವುದು ಎಂಬುದನ್ನು ಬಿ.ಎ./ಬಿ.ಎಸ್ಸಿ./ಬಿ.ಕಾಂ./ಬಿ.ಎಸ್.ಡಬ್ಲ್ಯು./ ಬಿ.ಎಸ್ಸಿ. (ಎಫ್.ಎನ್.ಡಿ.)/ ಬಿ.ಎಸ್ಸಿ. ಆ್ಯನಿಮೇಶನ್ ಮತ್ತು ವಿಜ್ಯುವಲ್ ಇಫೆಕ್ಟ್ಸ್ / ಬಿ.ಎಸಿ.(ಮಡ್ ಟೆಕ್ನಾಲಜಿ) ಶಿಕ್ಷಣ ನೀಡುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮತ್ತು ಸದರಿ ಪರೀಕ್ಷೆಗಳಿಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳ ಗಮನಕ್ಕೆ ಈ ಮೂಲಕ ತರಲಾಗಿದೆ.

**ಸೂಚನೆಗಳು:**

1. ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಎಲ್ಲಾ ವಿಷಯಗಳಿಗೆ/ಪತ್ರಿಕೆಗಳಿಗೆ ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು. ಆಯ್ಕೆ ಆಧಾರಿತ ಕ್ರೆಡಿಟ್ ಮತ್ತು ಕ್ರೆಡಿಟ್ ಆಧಾರಿತ ಸೆಮಿಸ್ಟರ್ ಹಾಗೂ ಇತರೇ ಸೆಮಿಸ್ಟರ್ ಸ್ಕೀಂನ ಆವರ್ತಿತ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸುವುದು. 2006ರ ನಂತರದ ಸಾಲಿನ ಕ್ರೆಡಿಟ್ ಆಧಾರಿತ ಸೆಮಿಸ್ಟರ್ ಸ್ಕೀಂನ ವಿದ್ಯಾರ್ಥಿಗಳು ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ಕಡ್ಡಾಯ ವಿಷಯ (ಫೌಂಡೇಶನ್ ಕೋರ್ಸ್) ಹಾಗೂ ಪಠ್ಯೇತರ ವಿಷಯ (ಇಸಿ/ಸಿಸಿ)ಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

2. ಪ್ರಾಯೋಗಿಕ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳ ಮುಂಚಿತವಾಗಿ ನಡೆಸತಕ್ಕದ್ದು. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದು.

3. ಸವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು.

4. ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕ ರೂ. 120.00 (ರೂಪಾಯಿ ನೂರ ಇಪ್ಪತ್ತು)ನ್ನು ಕಾಲೇಜು ಮುಖ್ಯಸ್ಥರಲ್ಲಿ ಪಾವತಿಸಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವುದು.

5. *ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹಾಗೂ ಸದ್ರಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಶುಲ್ಕ ಪಾವತಿಸಿದ ರಶೀದಿ/ಚಲನ್‌ನನ್ನು ಪ್ರತ್ಯೇಕವಾಗಿ ಎಲ್ಲಾ ವಿವರಗಳನ್ನೊಳಗೊಂಡ ಮಾಹಿತಿಯೊಂದಿಗೆ ಸಲ್ಲಿಸತಕ್ಕದ್ದು.*

6. *ಕುಲಸಚಿವರಿಂದ ಪ್ರವೇಶಾತಿ ಮತ್ತು ವರ್ಗಾವಣೆ ಪ್ರವೇಶಾತಿ ಅನುಮೋದಿಸಲ್ಪಡದ ವಿದ್ಯಾರ್ಥಿಗಳು ಮತ್ತು ಕಡಿಮೆ ಹಾಜರಾತಿ ಪಡೆದ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.* ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾನಿಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ಕಾಲೇಜು ಅಥವಾ ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.

7. ವಿದ್ಯಾರ್ಥಿಗಳಿಗೆ ಇಚ್ಛೆ ಬಂದಂತೆ ಪರೀಕ್ಷಾ ಕೇಂದ್ರವನ್ನು ಆರಿಸಲು ಅವಕಾಶವಿರುವುದಿಲ್ಲ.

8. *ವಿಶ್ವವಿದ್ಯಾನಿಲಯದ ವಿನಿಯಮಾವಳಿ (ರೆಗ್ಯುಲೇಶನ್) ಪ್ರಕಾರ ಪರೀಕ್ಷೆಗೆ ಹಾಜರಾಗಲು ಅರ್ಹತೆಯನ್ನು ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು ಸಲ್ಲಿಸಲು ಅನುಮತಿಯನ್ನು ನೀಡಲಾಗಿದೆ. ವಿಶ್ವವಿದ್ಯಾನಿಲಯದ ತಿದ್ದುಪಡಿ ವಿನಿಯಮದ ಪ್ರಕಾರ 2014 ಹಾಗೂ ಅದರ ಹಿಂದಿನ ಸಾಲಿನ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ವಿಶೇಷ ಪರೀಕ್ಷಾ ಶುಲ್ಕವನ್ನು ಪಾವತಿಸಿ, ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗಿರುತ್ತಾರೆ.* ಸದ್ರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು. ಇಲ್ಲವಾದಲ್ಲಿ ಕಾಲೇಜಿನ ಪ್ರಾಂಶುಪಾಲರೇ ಜವಾಬ್ದಾರರಾಗುವರು.

9. ಇನ್ನಿತರ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿರುವುದರಿಂದ (ಕಾಲೇಜು ಮತ್ತು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ) ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡಾ ನಿಗದಿತ ಶುಲ್ಕದೊಂದಿಗೆ ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಂತೆ (ಇತರ ವಿದ್ಯಾರ್ಥಿಗಳೊಂದಿಗೆ) ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ನಿಗಾವಹಿಸತಕ್ಕದು.

10. *ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳ ಪರೀಕ್ಷಾ ಹಣಕಾಸು ತಖ್ತೆ ಹಾಗೂ ಪರೀಕ್ಷಾರ್ಥಿಗಳ ಪಟ್ಟಿಯನ್ನು ಅನುಮೋದಿಸಲ್ಪಟ್ಟ ಪ್ರವೇಶಾನುಮೋದನೆ ಪಟ್ಟಿಯಲ್ಲಿ ಸೂಚಿಸಿರುವ ಮಾದರಿಯಲ್ಲಿ ಯಾವುದೇ ಕಾಗುಣಿತ ವ್ಯತ್ಯಾಸವಿಲ್ಲದಂತೆ ದಾಖಲಿಸಬೇಕು.*

11. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು (ದಂಡಶುಲ್ಕ ರಹಿತ ಮತ್ತು ವಿವಿಧ ದರಗಳಲ್ಲಿ ದಂಡಶುಲ್ಕ ಸಹಿತ) ಕಾಲೇಜಿನ ಮುಖ್ಯಸ್ಥರಲ್ಲಿ ಪಾವತಿ ಮಾಡಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

<u>ಪರೀಕ್ಷಾ ಶುಲ್ಕವನ್ನು ಕಟ್ಟಲು ನಿಗದಿಪಡಿಸಲಾದ ಅಂತಿಮ ದಿನಾಂಕ:</u>

| | | |
|---|---|---|
| ದಂಡಶುಲ್ಕ ರಹಿತ | . . . | 22.02.2021 |
| ದಂಡಶುಲ್ಕ ದಿನವೊಂದಕ್ಕೆ ರೂ. 55/- ರಂತೆ | . . . | 23.02.2021 ರಿಂದ 26.02.2021ರವರೆಗೆ |
| ದಂಡಶುಲ್ಕ ದಿನವೊಂದಕ್ಕೆ ರೂ.110/- ರಂತೆ | . . . | 27.02.2021 ರಿಂದ 02.03.2021ರವರೆಗೆ |

12. ಒಮ್ಮೆ ಪಾವತಿಸಲಾದ ಪರೀಕ್ಷಾ ಶುಲ್ಕವನ್ನು ಯಾವ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗಳಿಗೆ ಸರಿದೂಗಿಸಿಕೊಳ್ಳಲಾಗುವುದಿಲ್ಲ.

13. *ಸೆಪ್ಟೆಂಬರ್/ಅಕ್ಟೋಬರ್ 2020ರ ಪರೀಕ್ಷೆಯ ಫಲಿತಾಂಶ ಪ್ರಕಟವಾಗದ ವಿದ್ಯಾರ್ಥಿಗಳು, ಮರು ಮೌಲ್ಯಮಾಪನ ಮತ್ತು ಮರು ಸಂಕಲನಕ್ಕೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಹಾಗೂ ಫಲಿತಾಂಶ ಪ್ರಕಟವಾಗಲು ಬಾಕಿ ಇರುವ ವಿದ್ಯಾರ್ಥಿಗಳು ಸಹ ಪರೀಕ್ಷೆಗೆ ನಿಗದಿಪಡಿಸಿದ ದಿನಾಂಕದೊಳಗಾಗಿ ಪರೀಕ್ಷಾ ಶುಲ್ಕದೊಂದಿಗೆ ಅಭ್ಯರ್ಥನ ಪತ್ರವನ್ನು ಸಲ್ಲಿಸತಕ್ಕದ್ದು. ಯಾವುದೇ ಕಾರಣಕ್ಕೂ ಅಂತಹ ಅಭ್ಯರ್ಥಿಗಳಿಗೆ ಪಾವತಿ ದಿನಾಂಕವನ್ನು ಮುಂದೂಡಲಾಗುವುದಿಲ್ಲ. ಪರೀಕ್ಷಾ ಅವ್ಯವಹಾರಗಳಲ್ಲಿ ಭಾಗಿಯಾಗಿ, ವಿಶ್ವವಿದ್ಯಾನಿಲಯದ ನಿರ್ಣಯ ಬಾಕಿ ಇರುವಂತಹ ಅಭ್ಯರ್ಥಿಗಳು ಸಹ ನಿಗದಿತ ಸಮಯದೊಳಗೆ ಶುಲ್ಕವನ್ನು ಪಾವತಿಸಬೇಕು ಮತ್ತು ಅಭ್ಯರ್ಥನ ಪತ್ರವನ್ನು ಸಲ್ಲಿಸಬೇಕು.*

14. ಅಭ್ಯರ್ಥಿಗಳು ತಮ್ಮ ಪರೀಕ್ಷಾ ಶುಲ್ಕವನ್ನು ಕಾಲೇಜು ಆಫೀಸಿನಲ್ಲಿ ಪಾವತಿಸಬೇಕು ಮತ್ತು ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಬೇಕು. ಶುಲ್ಕವನ್ನು ಪಾವತಿಸಿದ ಬಗ್ಗೆ ಪಡೆದ ರಶೀದಿಯನ್ನು ಪ್ರತ್ಯೇಕವಾಗಿ ಕಳುಹಿಸಿ ಕೊಡಬೇಕು ಹಾಗೂ ಮೊಬಲಗು, ದಿನಾಂಕ ಮತ್ತು ರಶೀದಿ ಸಂಖ್ಯೆಗಳನ್ನು ಆನ್‌ಲೈನ್ ಪರೀಕ್ಷಾ ಅರ್ಜಿಯಲ್ಲಿ ವಿವರವಾಗಿ ನಮೂದಿಸಬೇಕು.

15.

| ಕ್ರಮ ಸಂಖ್ಯೆ | ಪರೀಕ್ಷೆ | ಆಯ್ಕೆ ಆಧಾರಿತ ಕ್ರೆಡಿಟ್ ಮತ್ತು ಕ್ರೆಡಿಟ್ ಆಧಾರಿತ ಸೆಮಿಸ್ಟರ್/ ವರ್ಷ | ಶುಲ್ಕ ದರ |
|---|---|---|---|
| 1. | ಬಿ.ಎ./ಬಿ.ಕಾಂ./ ಬಿ.ಎಸ್.ಡಬ್ಲ್ಯು. | <u>ಪ್ರಥಮ ಹಾಗೂ ತೃತೀಯ ಸೆಮಿಸ್ಟರ್</u> | |
| | | <u>(ಪ್ರಾಯೋಗಿಕ ಪರೀಕ್ಷೆ ಹೊರತು ಪಡಿಸಿ)</u> | |
| | | ಪ್ರಥಮ/ದ್ವಿತೀಯ ವರ್ಷ ಪೂರ್ಣ ಪರೀಕ್ಷೆಗೆ | ರೂ.270.00 |
| | | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.320.00 |
| | | ವಿಷಯವೊಂದಕ್ಕೆ | ರೂ.150.00 |
| | | <u>(ಪ್ರಾಯೋಗಿಕ ಪರೀಕ್ಷೆಯೊಂದಿಗೆ)</u> | |
| | | ಪ್ರಥಮ/ದ್ವಿತೀಯ ವರ್ಷ ಪೂರ್ಣ ಪರೀಕ್ಷೆಗೆ | ರೂ.400.00 |
| | | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.400.00 |
| | | ವಿಷಯವೊಂದಕ್ಕೆ | ರೂ.220.00 |
| 2. | ಬಿ.ಎ./ಬಿ.ಕಾಂ./ ಬಿ.ಎಸ್.ಡಬ್ಲ್ಯು. | (ತೃತೀಯ ವರ್ಷ ಪ್ರಾಯೋಗಿಕ ಪರೀಕ್ಷೆಗಳನ್ನು ಹೊರತುಪಡಿಸಿ) | |
| | | <u>ಐದನೇ ಸೆಮಿಸ್ಟರ್</u> | |
| | | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.430.00 |
| | | ಸೆಮಿಸ್ಟರ್ ಹೊರತುಪಡಿಸಿ ಪೂರ್ಣ ಪರೀಕ್ಷೆಗೆ | ರೂ.430.00 |
| | | ವಿಷಯವೊಂದಕ್ಕೆ | ರೂ.220.00 |
| | | (ತೃತೀಯ ವರ್ಷದ ಪ್ರಾಯೋಗಿಕ ಪರೀಕ್ಷೆಯೊಂದಿಗೆ) | |
| | | <u>ಐದನೇ ಸೆಮಿಸ್ಟರ್</u> | |
| | | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.580.00 |
| | | ಸೆಮಿಸ್ಟರ್ ಹೊರತುಪಡಿಸಿ ಪೂರ್ಣ ಪರೀಕ್ಷೆಗೆ | ರೂ.580.00 |
| | | ವಿಷಯವೊಂದಕ್ಕೆ | ರೂ.320.00 |
| 3. | ಬಿ.ಎಸ್ಸಿ. | <u>ಪ್ರಥಮ ಹಾಗೂ ತೃತೀಯ ಸೆಮಿಸ್ಟರ್</u> | |
| | | <u>(ಪ್ರಾಯೋಗಿಕ ಪರೀಕ್ಷೆ ಹೊರತುಪಡಿಸಿ)</u> | |
| | | ಪ್ರಥಮ/ದ್ವಿತೀಯ ವರ್ಷ ಪೂರ್ಣ ಪರೀಕ್ಷೆಗೆ | ರೂ.430.00 |
| | | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.430.00 |
| | | ವಿಷಯವೊಂದಕ್ಕೆ | ರೂ.150.00 |
| | | (ಪ್ರಾಯೋಗಿಕ ಪರೀಕ್ಷೆಯೊಂದಿಗೆ) | |
| | | ಪ್ರಥಮ/ದ್ವಿತೀಯ ವರ್ಷ ಪೂರ್ಣ ಪರೀಕ್ಷೆಗೆ | ರೂ.430.00 |
| | | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.430.00 |
| | | ವಿಷಯವೊಂದಕ್ಕೆ | ರೂ.220.00 |

| | | | |
|---|---|---|---|
| | | ತೃತೀಯ ವರ್ಷ<br>(ಪ್ರಾಯೋಗಿಕ ಪರೀಕ್ಷೆಗಳನ್ನು ಹೊರತುಪಡಿಸಿ)<br>ಐದನೇ ಸೆಮಿಸ್ಟರ್<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>ಸೆಮಿಸ್ಟರ್ ಹೊರತುಪಡಿಸಿ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ<br>(ಪ್ರಾಯೋಗಿಕ ಪರೀಕ್ಷೆಯೊಂದಿಗೆ)<br>ಐದನೇ ಸೆಮಿಸ್ಟರ್<br>ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ<br>ಸೆಮಿಸ್ಟರ್ ಹೊರತುಪಡಿಸಿ ಪೂರ್ಣ ಪರೀಕ್ಷೆಗೆ<br>ವಿಷಯವೊಂದಕ್ಕೆ | ರೂ.580.00<br>ರೂ.580.00<br>ರೂ.220.00<br><br>ರೂ.580.00<br>ರೂ.580.00<br>ರೂ.320.00 |
| 4. | ಬಿ.ಎಸ್ಸಿ.(ಎಫ್.ಎನ್.ಡಿ.) | ಪರೀಕ್ಷಾ ಶುಲ್ಕದ ದರ (I, III ಮತ್ತು V ಸೆಮಿಸ್ಟರ್)<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ | ರೂ.2,130.00<br>ರೂ. 430.00 |
| 5. | ಬಿ.ಎಸ್ಸಿ. ಆನಿಮೇಶನ್ ಮತ್ತು ವಿಜ್ಯುವಲ್ ಇಫೆಕ್ಟ್ಸ್ | ಪರೀಕ್ಷಾ ಶುಲ್ಕದ ದರ (I, III ಮತ್ತು V ಸೆಮಿಸ್ಟರ್)<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ | ರೂ.1,200.00<br>ರೂ. 430.00 |
| 6. | ಬಿ.ಎಸ್ಸಿ.(ಫುಡ್ ಟೆಕ್ನಾಲಜಿ) | ಪರೀಕ್ಷಾ ಶುಲ್ಕದ ದರ (I III ಮತ್ತು V ಸೆಮಿಸ್ಟರ್)<br>ಪ್ರತಿ ಸೆಮಿಸ್ಟರಿನ ಪೂರ್ಣ ಪರೀಕ್ಷೆಗೆ(ಎಲ್ಲಾ ಪತ್ರಿಕೆಗಳನ್ನೊಳಗೊಂಡು)<br>ವಿಷಯವೊಂದಕ್ಕೆ | ರೂ.2,130.00<br>ರೂ. 430.00 |

16. ವಿದ್ಯಾರ್ಥಿಗಳು ಪರೀಕ್ಷೆಯ ಯಾವುದಾದರೂ ಭಾಗ/ಭಾಗಗಳಿಗೆ ಪಾವತಿಸಲಿರುವ ಒಟ್ಟು ಪರೀಕ್ಷಾ ಶುಲ್ಕವು ನಿಗದಿತ ಪೂರ್ಣ ಪರೀಕ್ಷಾ ಶುಲ್ಕವನ್ನು ಮೀರಬಾರದು.

17. ವಿದೇಶಿ ಅಭ್ಯರ್ಥಿಗಳು ನಿಗದಿಪಡಿಸಿದ ಎಲ್ಲಾ ಶುಲ್ಕಗಳ ಮೂರು ಪಟ್ಟು ಶುಲ್ಕವನ್ನು ಪಾವತಿಸತಕ್ಕದ್ದು.

18. ಮೇಲೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ ಪ್ರತೀ ಪರೀಕ್ಷೆಗೆ ರೂ.230/- ಅಂಕಪಟ್ಟಿ ಶುಲ್ಕ ಮತ್ತು ರೂ.120/- ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕಗಳನ್ನು ಪಾವತಿಸತಕ್ಕದ್ದು.

19. ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ಮಾತ್ರ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ.

    ಆ) ಪ್ರ. ವರ್ಗ-1 (ಆದಾಯ ಮಿತಿ ರೂ. 2,50,000/- ಮೀರದ)ಕ್ಕೆ ಸೇರಿದ ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ಮಾತ್ರ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ.

    ಇ) ಕುಟುಂಬದ ವಾರ್ಷಿಕ ವರಮಾನ ರೂ.1,00,000/- ಆದಾಯ ಮಿತಿಯೊಳಗಿರುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮಾತ್ರ ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ.

    ಈ) ಪುನರಾವರ್ತಿತ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ ಎಲ್ಲಾ ಅಭ್ಯರ್ಥಿಗಳು ಪರೀಕ್ಷಾ ವಿನಾಯಿತಿ ಪಡೆಯುವ ಅಭ್ಯರ್ಥಿಗಳು ಸೇರಿದಂತೆ ರೂ.230/- ಅಂಕಪಟ್ಟಿ ಶುಲ್ಕ ಮತ್ತು ರೂ. 120/- ಆನ್‌ಲೈನ್ ಎಪ್ಲಿಕೇಶನ್ ಪ್ರೊಸೆಸಿಂಗ್ ಶುಲ್ಕವನ್ನು ಪಾವತಿಸತಕ್ಕದ್ದು.

20. ವಿದ್ಯಾರ್ಥಿಗಳಿಂದ ಪಡೆದ ಒಟ್ಟು ಶುಲ್ಕವನ್ನು ಈ ಕೆಳಗಿನ ಕೋಡ್ ಸಂಖ್ಯೆಗಳಲ್ಲಿ ಬ್ಯಾಂಕ್ ಚಲನ್ ಮುಖಾಂತರ ಮಂಗಳೂರು ವಿಶ್ವವಿದ್ಯಾನಿಲಯ ನಿಧಿಗೆ ಪಾವತಿಸತಕ್ಕದ್ದು.

    ಅ) ಅರ್ಜಿ ಶುಲ್ಕ ... 008/14
    ಆ) ಪರೀಕ್ಷಾ ಶುಲ್ಕ ... 008/23
    ಇ) ಅಂಕಪಟ್ಟಿ ಶುಲ್ಕ ... 008/24

21. ಈ ಕೆಳಗೆ ನಮೂದಿಸಿರುವ ತಖ್ತೆಗಳನ್ನು ಮತ್ತು ದಾಖಲೆ ಪತ್ರಗಳನ್ನು ತಪ್ಪದೇ ಈ ಕಛೇರಿಗೆ ದಿನಾಂಕ: ***04.03.2021***ರ ಒಳಗಾಗಿ ಕಳುಹಿಸಿಕೊಡುವುದು.

    ಅ) ಅಭ್ಯರ್ಥನ ಪಟ್ಟಿ - ದ್ವಿಪ್ರತಿಗಳಲ್ಲಿ

    ಆ) ***2006 ಹಾಗೂ ಅದರ ಹಿಂದಿನ ಸಾಲಿನ ವಿದ್ಯಾರ್ಥಿಗಳ ಮ್ಯಾನ್ಯುವಲ್ ಅಭ್ಯರ್ಥನ ಪಟ್ಟಿಯನ್ನು ದ್ವಿಪ್ರತಿಗಳಲ್ಲಿ ಪ್ರತ್ಯೇಕವಾಗಿ ಸಲ್ಲಿಸುವುದು.***

ಇ) ಕ್ರೋಢೀಕೃತ ಪರೀಕ್ಷಾ ಶುಲ್ಕವನ್ನು ಪಾವತಿಸಿದ ಒಂದು ಚಲನ್/ಡಿ.ಡಿ.

ಈ) ಹಣಕಾಸು ತ:ಖ್ತೆ

ಉ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡಲಾದ ಶುಲ್ಕ ವಿನಾಯಿತಿ ತ:ಖ್ತೆಗಳು (ಮೂರು ಪ್ರತಿಗಳಲ್ಲಿ) ಅಂತಹ ಯಾವುದೇ ಬೇಡಿಕೆಗಳು ಇಲ್ಲದಿದ್ದಲ್ಲಿ ಶೂನ್ಯ ವರದಿಯನ್ನು ಕಳುಹಿಸಿಕೊಡಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಕಾಲೇಜುಗಳ ಪ್ರಾಂಶುಪಾಲರು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣೆ ಪಡೆದು ಹಿಂದಿನ ವರ್ಷಗಳ ಶುಲ್ಕ ಬಾಕಿಯಿದ್ದಲ್ಲಿ ಅದನ್ನು ಸೇರಿಸಿ ವಿಶ್ವವಿದ್ಯಾನಿಲಯ ನಿಧಿಗೆ ಜಮೆ ಮಾಡುವಂತೆ ತಿಳಿಸಲಾಗಿದೆ.

ಊ) ಪ್ರ. ವರ್ಗ-1ಕ್ಕೆ ಸೇರಿದ (ಆದಾಯ ಮಿತಿ ರೂ. 2,50,000/- ಮೀರದ) ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ವಿನಾಯಿತಿ ಬಗ್ಗೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಕ್ಲೇಮು ಸಲ್ಲಿಸಿ ಸ್ವೀಕೃತಿ ಪಡೆದ ಶುಲ್ಕ ಮರುಭರಣೆಯ ಬಿಲ್ಲಿನ ಪ್ರತಿಯನ್ನು (ಮೂರು ಪ್ರತಿಗಳು) ಕಳುಹಿಸಿಕೊಡಬೇಕು. ಇಂತಹ ಯಾವುದೇ ಬೇಡಿಕೆಗಳು ಇಲ್ಲದಿದ್ದಲ್ಲಿ ಶೂನ್ಯ ವರದಿಯನ್ನು ಕಳುಹಿಸುವುದು.

ಇ) ಹಿಂದುಳಿದ ವರ್ಗಗಳ (ಕುಟುಂಬದ ವಾರ್ಷಿಕ ವರಮಾನ ರೂ.1,00,000/- ಮೀರದ) ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಬಗ್ಗೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಕ್ಲೇಮು ಸಲ್ಲಿಸಿ ಸ್ವೀಕೃತಿ ಪಡೆದ ಶುಲ್ಕ ಮರುಭರಣೆಯ ಬಿಲ್ಲಿನ ಪ್ರತಿಯನ್ನು (ಮೂರು ಪ್ರತಿಗಳು) ಕಳುಹಿಸಿಕೊಡಬೇಕು. ಇಂತಹ ಯಾವುದೇ ಬೇಡಿಕೆಗಳು ಇಲ್ಲದಿದ್ದಲ್ಲಿ ಶೂನ್ಯ ವರದಿಯನ್ನು ಕಳುಹಿಸುವುದು

ಋ) ಪ್ರತೀ ಸೆಮಿಸ್ಟರ್‌ನ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುವ ತ:ಖ್ತೆ(ಲಗತ್ತಿಸಲಾದ ನಮೂನೆಯಲ್ಲಿ) ವಿದ್ಯಾರ್ಥಿಗಳ ವಿವರವನ್ನು Format 1 ಮತ್ತು Format 2, ಲಗತ್ತಿಸಲಾದ ಎರಡೂ ಅಂಕಿಅಂಶ ತ:ಖ್ತೆಗಳನ್ನು ಕಡ್ಡಾಯವಾಗಿ ಈ ಕಚೇರಿಗೆ ಕಳುಹಿಸತಕ್ಕದ್ದು.

ಎ) ಇತರ ಕಾಲೇಜು/ ವಿಶ್ವವಿದ್ಯಾನಿಲಯಗಳಿಂದ ವರ್ಗಾವಣೆ ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳ ಬಗ್ಗೆ ಪ್ರತ್ಯೇಕ ವಿವರ ಸಲ್ಲಿಸುವುದು.

ಏ) ಪ್ರಶ್ನೆ ಪತ್ರಿಕೆ ಕೋರಿಕೆ ಪಟ್ಟಿ / ಲಿಖಿತ ತ:ಖ್ತೆಯನ್ನು ಮ್ಯಾನ್ಯುವಲ್ ಆಗಿ ತಯಾರಿಸಿ ದಿನಾಂಕ <u>04.03.2021</u>ರೊಳಗೆ ಇ.ಮೈಲ್ ಮೂಲಕ ಕಡ್ಡಾಯವಾಗಿ ಸಲ್ಲಿಸಬೇಕು ಹಾಗೂ ಅಂಚೆಯ ಮೂಲಕವೂ ಕಳುಹಿಸಿಕೊಡತಕ್ಕದ್ದು.

22. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಿ, ಅಂತಿಮ ಆನ್‌ಲೈನ್ ಪ್ರಿಂಟೌಟ್ ಪ್ರತಿಗಳನ್ನು (ದ್ವಿಪ್ರತಿಗಳಲ್ಲಿ) ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ 15 ದಿನಗಳ ಮುಂಚಿತವಾಗಿ ಈ ಕಛೇರಿಗೆ ತಪ್ಪದೆ ಸಲ್ಲಿಸಲು ತಿಳಿಸಲಾಗಿದೆ.

23. ಈಗಾಗಲೇ ಏಪ್ರಿಲ್/ಮೇ 2020ನೇ ಸಾಲಿನ ಎಲ್ಲಾ ಪದವಿ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳಿಗೆ ಪ್ರಸ್ತುತ <u>ಪರೀಕ್ಷಾ ಶುಲ್ಕದಲ್ಲಿ ಮಾತ್ರ</u> 50% ಹಾಗೂ ಉಳಿದಂತೆ ಪ್ರಸ್ತುತ ನಿಗದಿಪಡಿಸಲಾಗಿರುವ ಶುಲ್ಕವನ್ನು ಪಡೆದುಕೊಳ್ಳುವುದು.

11/02/21

ಕುಲಸಚಿವರು (ಪರೀಕ್ಷಾಂಗ)

ಲಗತ್ತು: ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುವ ತ:ಖ್ತೆ.

ರಿಗೆ: ಬಿ.ಎ./ ಬಿ.ಎಸ್ಸಿ./ ಬಿ.ಕಾಂ./ ಬಿ.ಎಸ್.ಡಬ್ಲ್ಯು.,/ ಬಿ.ಎಸ್ಸಿ. (ಎಫ್.ಎನ್.ಡಿ.)/ಆ್ಯನಿಮೇಶನ್ ಮತ್ತು ವಿಜ್ಯುವಲ್ ಇಫೆಕ್ಟ್ಸ್ / ಬಿ.ಎಸಿ.(ಫುಡ್ ಟೆಕ್ನಾಲಜಿ) ಪದವಿ ಹೊಂದಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1. ಕುಲಸಚಿವರು/ ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ಸಹಾಯಕ ಕುಲಸಚಿವರು(ಪರೀಕ್ಷಾಂಗ) 1 ಮತ್ತು 2, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3. ಕುಲಪತಿಯವರ ಆಪ್ತ ಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ವಿಶ್ವವಿದ್ಯಾನಿಲಯ ಕಾಲೇಜು ಆವರಣ, ಮಂಗಳೂರು.
5. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಡಿ.ಸಿ. ಆಫೀಸಿನ ಬಳಿ, ದ.ಕ., ಮಂಗಳೂರು.
6. ಆಪ್ತ ಸಹಾಯಕರು, ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
7. ಅಧೀಕ್ಷಕರು ಎಸ್.1, ಎಸ್.2, ಎಸ್.3, ಎಸ್.4, ಎಸ್.6.
8. ಸಿಸ್ಟಂ ಅನಾಲಿಸ್ಟ್, ಕಂಪ್ಯೂಟರ್ ವಿಭಾಗ, ಕುಲಸಚಿವ (ಪರೀಕ್ಷಾಂಗ)ರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.